



## ಚೆಂದದ ಚೆಲುವೆ ಈ ಸೌಗಂಧಿಕಾ ಪುಷ್ಪ

ಘಮಘಮ ಪರಿಮಳವಿರುವ ಸೌಗಂಧಿಕಾ ಹೂವಿನಲ್ಲಿ ಬಿಳಿ ಮತ್ತು ಹಳದಿ ವರ್ಣದ ಎರಡು ಜಾತಿಗಳಿವೆ. ಕರಾವಳಿಯಲ್ಲಿ ಸುರುಳಿ ಹೂವು ಎಂದು ಹೆಸರು. ಎಲೆಗಳು ಶುಂಠಿ ಎಲೆಗಳ ಹೋಲಿಕೆಯಿದ್ದರೂ ಅದಕ್ಕಿಂತ ಅಗಲವಾಗಿವೆ. ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಇದಕ್ಕೆ ಸಸ್ಯಶಾಸ್ತ್ರೀಯವಾಗಿ ಹೆಡಿಚಿಯಮ್ ಕರೋನರಿಯಮ್ ಎಂಬ ಹೆಸರಿದೆ.

ಚೀನಾದಲ್ಲಿ ಇದರ ಎಲೆಗಳಿಂದ ಔಷಧಗಳು, ಹೂಗಳಿಂದ ಸುಗಂಧಿತ ತೈಲ ತಯಾರಾಗುತ್ತದೆ. ಅನೇಕ ದೇಶಗಳಲ್ಲಿ ಕಾಡಿನ ಸಸ್ಯ. ಭಾರತದಲ್ಲಿ ಉದ್ಯಾನದ ಗಿಡ. ಆಗಸ್ಟ್ ತಿಂಗಳಿಂದ ಡಿಸೆಂಬರ್ ತನಕ ಹೂವಿನ ಸುಗ್ಗಿ. ರಾಯಲ್ ಹಾರ್ಟಿಕಲ್ಚರಲ್ ಸೊಸೈಟಿ ಗಾರ್ಡನ್ ಮೆರಿಟ್ ಪ್ರಶಸ್ತಿ ನೀಡಿರುವ ಇದನ್ನು ಕೇರಳದವರು ಸೌಗಂಧಿಕಂ ಎಂದು ಕರೆದಿದ್ದು, ಅದಕ್ಕೆ ಶುಂಠಿ ಲಿಲ್ಲಿ ಮತ್ತು ಬಟರ್ ಫ್ಲೈ ಎಂದೂ ಹೇಳುತ್ತಾರೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

## ಬಯಲು ಸೀಮೆಯ ಗೆಜ್ಜಡಿಕೆ...

ಈಗೆಲ್ಲಾ ತರಚಿದ ಅಥವಾ ಕೊಯ್ದ ಗಾಯಗಳಾದರೆ ವೈದ್ಯರ ಶಿಫಾರಸ್ಸಿನ ಮೇರೆಗೆ ಯಾವುದಾದರು ಆಯಿಂಟ್ಮೆಂಟನ್ನು ಹಚ್ಚುವುದು ಸಹಜ. ಆದರೆ ಆಧುನಿಕ ಚಿಕಿತ್ಸಾ ವಿಧಾನಗಳ ಪೂರ್ವದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಈ ರೀತಿಯ ತರಚಿದ ಅಥವಾ ಕೊಯ್ದ ಗಾಯಗಳಿಗೆ ಪರಿಣಾಮಕಾರಿಯಾದ ಔಷಧವಾಗಿ ಬಳಕೆಯಾಗುತ್ತಿದ್ದದ್ದು ತಪ್ಪಲೆ.

ಚಿತ್ರದಲ್ಲಿ ಕಾಣುತ್ತಿರುವ ತಪ್ಪಲೆಯನ್ನು ಗೆಜ್ಜಡಿಕೆ ಸಸಿ ಅಥವಾ ತಪ್ಪಲು /ತೊಪ್ಪಲು ಅಂತಲೂ ಕರೆಯಲಾಗುತ್ತದೆ. ಹುಲ್ಲು ಕೊಯ್ಯಲು, ಬೆಳೆಗಳನ್ನು ಕಟಾವು ಮಾಡಲು ಕುಡುಗೋಲುಗಳನ್ನು ಬಳಸುವುದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಆಕಸ್ಮಿಕವಾಗಿ ಕುಡುಗೋಲಿನಿಂದ ಕೈಗಳಿಗೆ ಅಥವಾ ದೇಹದ ಯಾವುದಾದರೂ ಭಾಗಗಳಿಗೆ ತರಚಿದ ಗಾಯಗಳಾದಾಗ ಅಥವಾ ಕೊಯ್ದಾಗ ತಕ್ಷಣವೇ ರಕ್ತ ಸೋರುವಿಕೆಯನ್ನು ನಿಲ್ಲಿಸಲು ಮತ್ತು ಗಾಯವು ಶೀಘ್ರವೇ ಗುಣಮುಖವಾಗುವಂತೆ ಮಾಡಲು ಈ ಸಸಿಯ ಎಲೆಗಳ ರಸವನ್ನು ಗಾಯದ ಮೇಲೆ ಹಿಂಡುತ್ತಾರೆ.

ಹಾಗೆಯೇ ಕಟ್ಟಿಗೆ ಕಡಿಯುವಾಗ ಕೊಡಲಿ ಅಥವಾ ಮಚ್ಚಿನಿಂದ ಯಾವುದಾದರೂ ತರಚಿದ, ಕೊಯ್ದ ಗಾಯಗಳಾದರೂ ಇದರ ಎಲೆಗಳ ರಸವನ್ನು ಗಾಯದ ಮೇಲೆ ಹಿಂಡಿದರೆ ಇದು ಮುಂದೆ ಆಗಬಹುದಾದ ಗಾಯದ ತೀವ್ರತೆಯನ್ನು ತಡೆಯುತ್ತದೆ ಎನ್ನುತ್ತಾರೆ ರೈತ ಮಹಿಳೆ ಗೌರಮ್ಮ. ಅಂದ ಹಾಗೆ ಇದರ ರಸ ಮನುಷ್ಯರಿಗೆ ಮಾತ್ರವಲ್ಲದೆ ದನಕರುಗಳಿಗೂ ಬಳಸುತ್ತಾರೆ. ಅವುಗಳಿಗೆ ತರಚಿದ ಗಾಯಗಳಾದಾಗ ವಾಸಿ ಮಾಡಲು ಮತ್ತು ವಿಶೇಷವಾಗಿ ಸೆಲೆ (ದೀರ್ಘ ಸಮಯದವರೆಗೆ ದನಕರುಗಳು ನೀರು ಕುಡಿಯದೆ ಇದ್ದಾಗ ಬರುವ ಕಾಯಿಲೆ) ಆದಾಗ ಈ ಗಿಡದ ಎಲೆಗಳ ರಸದ ಜೊತೆಯಲ್ಲಿ ಬೆಳ್ಳುಳ್ಳಿ, ಬಿಳಿ ಉಳ್ಳಾಗಡ್ಡೆ, ಮೆಣಸು, ಬಜೆ ಸೇರಿಸಿ ಚೆನ್ನಾಗಿ ಜಜ್ಜಿ ಸ್ವಲ್ಪ ನೀರು ಬೆರೆಸಿ, ಗೊಟ್ಟದ (ದನಕರುಗಳಿಗೆ ಔಷಧ ಕುಡಿಸಲು ಬಳಸುವ ಬಿದಿರಿನ ಕೊಳವೆ) ಮೂಲಕ ಕುಡಿಸಿದರೆ ಸೆಲೆರೋಗ ಶೀಘ್ರವೇ ಗುಣವಾಗುತ್ತದೆ ಎನ್ನುತ್ತಾರೆ ಗೆದ್ದಲಗಟ್ಟೆಯ ರೈತ ಗಂಗಾಧರ. ಅಂದಹಾಗೆ ಈ ಗಿಡಮೂಲಿಕೆ ನಮ್ಮ ಕಣ್ಣಿಗೆ ಬಿದ್ದಿದ್ದು ನಮ್ಮ ಕೂಡ್ಲಿಗಿ ತಾಲೂಕಿನ ಗೆದ್ದಲಗಟ್ಟೆಯ ಹೊಲಗಳಲ್ಲಿ, ಬದುಗಳಲ್ಲಿ, ನೀರು ಹೆಚ್ಚು ನಿಲ್ಲುವ ಸ್ಥಳಗಳಲ್ಲಿ. ಈ ಸಸಿಯ ಔಷಧೀಯ ಗುಣಗಳ ಬಗ್ಗೆ ಸಸ್ಯಶಾಸ್ತ್ರಜ್ಞರು ಹೆಚ್ಚಿನ ಅಧ್ಯಯನ ನಡೆಸಿದಲ್ಲಿ ಇದರ ಮತ್ತಷ್ಟು ಉಪಯೋಗಗಳ ಬಗ್ಗೆ ತಿಳಿದೀತು.

–ಶೇಖರಯ್ಯ ಟಿ.ಎಚ್.ಎಂ., ಕೂಡ್ಲಿಗಿ

